# ಅಪರಿಪೂರ್ಣ ಪೈಪೋಟಿ

ಮಾರುಕಟ್ಟೆ ಆಧಾರಿತ ಅರ್ಥವ್ಯವಸ್ಥೆಯನ್ನು, ಅದರಷ್ಟಕ್ಕೆ, ನಿರ್ಬಂಧಗಳಿಲ್ಲದೆ, ಒಂದು ಪರಿಪೂರ್ಣವಾದ ಸ್ಪರ್ಧಾತ್ಮಕ ವಾತಾವರಣದಲ್ಲಿ ಬೆಳೆಯಲು ಬಿಟ್ಟರೆ, ಅದು ಅತ್ಯುತ್ತಮವಾದ ಸಾಮಾಜಿಕ ಲಾಭಗಳನ್ನು ಒದಗಿಸುತ್ತದೆ ಎಂಬ ಪ್ರತಿಪಾದನೆಗೆ ಅರ್ಥಶಾಸ್ತ್ರಜ್ಞರ ನಡುವೆ ಬಲವಾದ ಬೆಂಬಲ ವ್ಯಕ್ತವಾಗಿತ್ತು ಮತ್ತು ಈ ಧೋರಣೆ ಇನ್ನೂ ಮುಖ್ಯವಾಹಿನಿಯ ಅರ್ಥಶಾಸ್ತ್ರದಲ್ಲಿ ಮುಂದುವರಿದಿದೆ. ಈ ವಲಯಗಳಲ್ಲಿ, 'ತಣಿಸಲಾಗದ ಏಕಸ್ವಾಮ್ಯದ ದರಿದ್ರ ಹಪಹಪಿ' (wretched spirit of monopoly)ಯ ಕುರಿತು ಆಡಮ್ ಸ್ಮಿತ್ ಹೇಳಿದ ಎಚ್ಚರಿಕೆಯ ಮಾತುಗಳು, ನೈಜ ಪ್ರಪಂಚದಲ್ಲಿ ಇದು ಉಂಟುಮಾಡಿದ, ನಮ್ಮ ಕಣ್ಣಿಗೆ ರಾಚುವಂತಹ ಬೆಳವಣಿಗೆಗಳ ಹೊರತಾಗಿಯೂ ಮರೆತುಹೋಗಿವೆ. ಮುಕ್ತ ಮಾರುಕಟ್ಟೆ ಆರ್ಥ ವ್ಯವಸ್ಥೆಯ ವಿರುದ್ಧ ನಿಲುವು ತಳೆದ ಚಿಂತಕರು, 'ಮುಕ್ತ ಮಾರುಕಟ್ಟೆ' ಪರ ಇರುವ ತಮ್ಮ ಸಹೋದ್ಯೋಗಿಗಳು ಹೇಗೆ 'ಮಾರುಕಟ್ಟೆಗಳ ದಕ್ಷತೆ' ಎಂಬುದನ್ನು ಭೋಳೆತನದಿಂದ ನಂಬಿ ಮೋಸಹೋಗುತ್ತಾರೆ ಮತ್ತು 'ಮಾರುಕಟ್ಟೆ ಆಧಾರಿತ ಅರ್ಥ ವ್ಯವಸ್ಥೆಯು ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತದೆ' ಎಂದು ಹೇಳಿಕೊಳ್ಳುವಂತ ಸಂದರ್ಭಗಳಲ್ಲಿ ಯಾವ ರೀತಿಯ ನಿರ್ಬಂಧನೆಗಳು ಕೆಲಸ ಮಾಡುತ್ತಿರುತ್ತವೆ ಎಂಬ ಅಂಶವನ್ನು ಪರಿಗಣಿಸದೆ ಇರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸುತ್ತಾರೆ. ಅಷ್ಟೇ ಅಲ್ಲದೆ, ಬಂಡವಾಳ ಒಂದು ಕಡೆ ಕೇಂದ್ರೀಕೃತವಾಗಿರುವುದು ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತಿದೆ. ಅಧಿಕ ಆರ್ಥಿಕ ಶಕ್ತಿ ಕೇಂದ್ರೀಕೃತರಾಗಿರುವ ಕೆಲವೇ ಜನರ ಒಂದು ಸಣ್ಣ ಗುಂಪು, ಅಂದರೆ ಅಲ್ಪಸಂಖ್ಯಾಸ್ವಾಮ್ಯ (oligopolies), ಅಥವಾ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ, ಅಂದರೆ ಏಕಸ್ವಾಮ್ಯ (monopolies) ಮಾರುಕಟ್ಟೆಯನ್ನು ನಿಯಂತ್ರಿಸುತ್ತಿರುವುದು ನಿಜ. ಸ್ಟಾಕ್ ಕಂಪನಿಗಳು ಮತ್ತು ಅಲ್ಲಿ ಮಾಲಿಕತ್ವ (ಷೇರುದಾರರು) ಮತ್ತು ನಿಯಂತ್ರಣ (ನಿರ್ವಾಹಕರು) - ಇದೆರಡರ ನಡುವಿನ ಬೇರ್ಪಡಿಸುವಿಕೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಬೃಹತ್ ವಾಣಿಜ್ಯ ಕೂಟ(conglomerates)ಗಳು ಸರ್ಕಾರಗಳ ಮೇಲೆ, ರಾಷ್ಟ್ರಗಳ ಮೇಲೆ ತಮ್ಮ ಪ್ರಭಾವ ಬೀರುತ್ತಿವೆ (ಜೋಸೆಫ್ ಶುಂಪೀಟರ್ ಹೇಳುವಂತೆ, 'ಪ್ರತಿಷ್ಠಾಪಿತ ಬಂಡವಾಳಶಾಹಿತ್ವ' (trustified capitalism). ಅರ್ಥಶಾಸ್ತ್ರಕ್ಕೆ ಈ ಹೊಸ ವಾಸ್ತವಕ್ಕೆ ಸಂಪೂರ್ಣವಾಗಿ ಕುರುಡಾಗಿರಲು ಸಾಧ್ಯವಾಗಲಿಲ್ಲ. ಹಾಗಾಗಿ ಪರಿಪೂರ್ಣ ಸ್ಪರ್ಧೆಯ ಆಚೆಗೆ ಮಾರುಕಟ್ಟೆಯ ಇತರ ಸ್ವರೂಪಗಳನ್ನು ಅರ್ಥಮಾಡಿಕೊಳ್ಳಲು ವಿಭಿನ್ನ ವಿಚಾರ ಪಂಥಗಳು ಹುಟ್ಟಿಕೊಂಡವು. ಇವುಗಳಲ್ಲಿ ಕೆಲವು ಪಂಥಗಳ ಸಂಕ್ಷಿಪ್ತ ಸಾರಾಂಶವನ್ನು ಮುಂದೆ ಕೊಡಲಾಗಿದೆ.

**ಹಳೆಯ ಸಾಂಸ್ಥಿಕ ಅರ್ಥಶಾಸ್ತ್ರ** (OLD INSTITUTIONAL ECONOMICS)

ನಾವು ಮೊದಲಿಗೆ ಆರ್ಥಿಕ ವ್ಯವಸ್ಥೆಯನ್ನು ಪ್ರಾಯೋಗಿಕ ಮತ್ತು ಐತಿಹಾಸಿಕ ಮಸೂರದ ಮೂಲಕ ನೋಡುವ ಮತ್ತು ಆರ್ಥಿಕ ವಿದ್ಯಮಾನಗಳ ಕುರಿತಂತೆ ವಿಕಸನೀಯ (evolutionist) ದೃಷ್ಟಿಕೋನವನ್ನು ಹೊಂದಿರುವ ಆರ್ಥಿಕ ವಿಚಾರ ಪಂಥದತ್ತ ತ್ವರಿತವಾಗಿ ಕಣ್ಣು ಹಾಯಿಸುವ ಮೂಲಕ ಆರಂಭಿಸೋಣ. ಇದನ್ನು ಇತ್ತೀಚೆಗೆ 'ಹಳೆಯ ಸಾಂಸ್ಥಿಕ ಅರ್ಥಶಾಸ್ತ್ರ'(old institutional economics,) ಎಂದು ಕೂಡ ಕರೆಯುತ್ತಾರೆ. ಇದರ ಮತ್ತು ಜರ್ಮನಿಯ ಹಳೆಯ ಐತಿಹಾಸಿಕ ವಿಚಾರ ಪಂಥದ ನಡುವೆ ಒಂದು ಸ್ಪಷ್ಟ ಮುಂದುವರಿಕೆಯ ಗೆರೆಯಿದೆ ('ಹೊಸ ಸಾಂಸ್ಥಿಕ ಅರ್ಥಶಾಸ್ತ್ರ' ವು ಹಳೆಯ ಸಾಂಸ್ಥಿಕ ಅರ್ಥಶಾಸ್ತ್ರಕ್ಕಿಂತ ಭಿನ್ನವಾಗಿ ಸಾಮಾಜಿಕ ನಿಯಮಗಳು, ಸಾಂಸ್ಥಿಕ ವ್ಯವಸ್ಥೆ, ಇತ್ಯಾದಿಗಳನ್ನು ನವ ಸಾಂಪ್ರದಾಯಿಕ ಮಾದರಿ (neoclassical model)ಯ ತರ್ಕಬದ್ಧ ಆಯ್ಕೆ (rational choice)ಯ ದೃಷ್ಟಿಕೋನದಿಂದ ಅಧ್ಯಯನ ಮಾಡುತ್ತದೆ; ಅಧ್ಯಾಯ 12 ನೋಡಿ). ಇದರ ಸಮರ್ಥಕರು ಮಾದರಿಗಳನ್ನು ನಿರ್ಮಿಸುವ ಮೂಲಕ ವಾದಿಸುವ ಬದಲು ಹೆಚ್ಚು ಸಮಾಜ ಶಾಸ್ತ್ರೀಯ ನೆಲೆಯಲ್ಲಿ ವಾದಿಸುತ್ತಾರೆ. ಅವರು 'ಆರ್ಥಿಕ ಮನುಷ್ಯ' (homo economicus), ಅಂದರೆ ಸ್ವಂತ ಆಸ್ತಿ ಮತ್ತು ಆರ್ಥಿಕತೆ ಇರುವಾತ ಮತ್ತು ನವ ಸಾಂಪ್ರದಾಯಿಕ ಅರ್ಥಶಾಸ್ತ್ರದ ಎರಡು ಕೇಂದ್ರ ಪರಿಕಲ್ಪನೆಗಳಾದ, ಇರುವ ಮತ್ತು ಗೊತ್ತಿರುವ ಅಡೆತಡೆಗಳ ಹೊರತಾಗಿಯೂ ಗರಿಷ್ಠ ಸಾಧನೆ ಮಾಡಬಹುದು ಎಂಬ ಅರ್ಥದಲ್ಲಿ (ಕಿರಿದಾದ) ಹುಟ್ಟಿಕೊಂಡ ತಾರ್ಕಿಕತೆಯ ಪರಿಕಲ್ಪನೆ (concept of rationality) ಮತ್ತು ಸಮತೋಲನದ ಪರಿಕಲ್ಪನೆ(concept of equilibrium)ಯನ್ನು ತಿರಸ್ಕರಿಸುತ್ತಾರೆ. ಅವರ ದೃಷ್ಟಿಯಲ್ಲಿ, "ಕೇವಲ ವಿರೋಧಾಭಾಸಗಳ ರಾಶಿ" - ಭಾವೋದ್ರೇಕಗಳು, ಪ್ರವೃತ್ತಿಗಳು ಮತ್ತು ಅಭ್ಯಾಸಗಳ ಆಟದ ವಸ್ತು' ಎಂದು ಡೇವಿಡ್ ಹ್ಯೂಮ್ ಜನರನ್ನು ವರ್ಣಿಸಿದ ರೀತಿ, 'ಸಂಪೂರ್ಣ ಮಾಹಿತಿಯನ್ನೊಳಗೊಂಡ, ಪ್ರಪಂಚದ ಎಲ್ಲಾ ಸಂಭವನೀಯ ಸಂದರ್ಭಗಳನ್ನು ಮುಂಗಾಣುವ ಮತ್ತು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ, ಸಮಾಧಾನದಿಂದ ಲೆಕ್ಕಾಚಾರ ಮಾಡುವ ಯಂತ್ರಮಾನವ'ನ ಚಿತ್ರಣಕ್ಕಿಂತ ವಾಸ್ತವಕ್ಕೆ ಹೆಚ್ಚು ಹತ್ತಿರವಾಗಿದೆ. ಮನುಷ್ಯನು ಜಗತ್ತನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದಾನೆ ಎಂಬ ದೃಷ್ಟಿಕೋನವನ್ನು ಸಾಂಸ್ಥಿಕ ಅರ್ಥಶಾಸ್ತ್ರಜ್ಞರು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ. ಅವರು ಉದ್ಯಮ ಸಂಸ್ಥೆಗಳನ್ನು ಅಪೂರ್ಣ ಮಾಹಿತಿ ಮತ್ತು ಅನಿಶ್ಚಿತತೆಯನ್ನು ನಿಭಾಯಿಸಲು ನಾವು ಕಂಡುಕೊಂಡ ಮಾರ್ಗವಾಗಿ ನೋಡುತ್ತಾರೆ.

ಈ ವಿಚಾರಧಾರೆಯ ಪ್ರಮುಖ ಪ್ರತಿನಿಧಿಯಾಗಿದ್ದವರು ಬಹುಶಃ ಥೋರ್ಸ್ಟೀನ್ ವೆಬ್ಲೆನ್ (1857-1929). ವೆಬ್ಲೆನ್ ತಮ್ಮ ಥಿಯರಿ ಆಫ್ ದಿ ಲೀಸರ್ ಕ್ಲಾಸ್ (Theory of the Leisure Class (1899),

ಎಂಬ ಗ್ರಂಥದಲ್ಲಿ, 'ಯಾವುದೇ ಮಾನವ ಕ್ರಿಯೆಯ ಮುಖ್ಯ ಉದ್ದೇಶ ಸಾಮಾಜಿಕ ಮನ್ನಣೆ ಮತ್ತು ಪ್ರತಿಷ್ಠೆಯನ್ನು ಗಳಿಸುವುದು,' ಎಂದು ಹೇಳುತ್ತಾರೆ. ಶ್ರೀಮಂತಿಕೆ ಮತ್ತು ಹೆಚ್ಚಿನ ಆದಾಯವು 'ಸುವ್ಯಕ್ತ ಭೋಗ' (conspicuous consumption)ವನ್ನು ಸಾಧಿಸಲು ಇರುವ ಒಂದು ಸಾಧನ; ಇತರರಿಗೆ ತೋರಿಸಿಕೊಳ್ಳಲು ನಡೆಸುವ ಸಂಪತ್ತಿನ ಸಾರ್ವಜನಿಕ ಪ್ರದರ್ಶನವು ಆಡಮ್ ಸ್ಮಿತ್ ಹೇಳಿದ 'ಶ್ರೀಮಂತಿಕೆಯ ಮೆರವಣಿಗೆ'(parade of riches)ಯನ್ನು ನೆನಪಿಸುತ್ತದೆ. ಸ್ಮಿತ್‌ರಂತೆ, ವೆಬ್ಲೆನ್ ಕೂಡ, 'ಪ್ರತಿಷ್ಠೆಯ ಸರಕುಗಳು ದುಬಾರಿಯಾದಷ್ಟು, ಅವುಗಳಿಗೆ ಹೆಚ್ಚಿನ ಬೇಡಿಕೆಯುಂಟಾಗುತ್ತದೆ - ಹೆಚ್ಚು ದುಬಾರಿ ಎಂದರೆ ಹೆಚ್ಚಿನ ಗುಣಮಟ್ಟ ಎಂದು ಜನರು ಪರಿಗಣಿಸುತ್ತಾರೆ,' ಎಂದು ವಾದಿಸುತ್ತಾರೆ. ಇದನ್ನು ವೆಬ್ಲೆನ್ ಪರಿಣಾಮ ಎಂದು ಕರೆಯಲಾಗುತ್ತದೆ. ಆದರೆ ಮಾರುಕಟ್ಟೆಗಳು ವ್ಯಕ್ತಿಗಳ ಪೊಳ್ಳುತನವನ್ನು ಪೋಷಿಸುತ್ತಾ ಹೋದಂತೆ, ದಕ್ಷತೆಯನ್ನು ನಿರ್ಣಯಿಸುವುದು ಹೇಗೆ? ವೆಬ್ಲೆನ್ ತಮ್ಮ ಥಿಯರಿ ಆಫ್ ಬಿಜಿನೆಸ್ ಎಂಟರ್‌ಪ್ರೈಸ್ (Theory of Business Enterprise,1904) ಎಂಬ ಗ್ರಂಥದಲ್ಲಿ ವ್ಯಾಪಾರ ವಹಿವಾಟಿನ ಜಗತ್ತನ್ನು ವಿಮರ್ಶಾತ್ಮಕ ದೃಷ್ಟಿಕೋನದಿಂದ ಪರಿಶೀಲಿಸುತ್ತಾರೆ. 'ಮ್ಯಾನೇಜರುಗಳು ಮತ್ತು ಬ್ಯಾಂಕರುಗಳು ಕೇವಲ ತಮ್ಮ ಹಿತಾಸಕ್ತಿಗಳನ್ನು ಭದ್ರಪಡಿಸಿಕೊಳ್ಳುತ್ತಾರೆಯೇ ಹೊರತು ತಮ್ಮ ಗ್ರಾಹಕರ ಅಥವಾ ಮಾಲಿಕರ ಹಿತಾಸಕ್ತಿಗಳನ್ನು ಅಲ್ಲ ಮತ್ತು ಹೆಚ್ಚಿನ ಸಲ ವ್ಯಾಪಾರ ವಹಿವಾಟಿನ ಬಗ್ಗೆ ಅವರ ತಿಳಿವಳಿಕೆಯು ಅಚ್ಚರಿಯೆನಿಸುವಷ್ಟು ಸೀಮಿತವಾಗಿರುತ್ತದೆ. ಅವರ ಆಸಕ್ತಿಯೇನಿದ್ದರೂ ಆದಷ್ಟು ಮಟ್ಟಿಗೆ ಸ್ಪರ್ಧೆಯನ್ನು ಇಲ್ಲವಾಗಿಸಿ, ಏಕಸ್ವಾಮ್ಯದ ಲಾಭ (monopoly rents)ಗಳನ್ನು ಬಾಚಿಕೊಳ್ಳುವುದಾಗಿರುತ್ತದೆ,' ಎಂದು ಅವರು ಅಭಿಪ್ರಾಯಪಡುತ್ತಾರೆ.

ವೆಬ್ಲೆನ್ ಅವರ ಅಧ್ಯಯನವನ್ನು ಆಧಾರವಾಗಿಟ್ಟುಕೊಂಡು ತಮ್ಮ ಅಧ್ಯಯನ ಮುಂದುವರಿಸುವ ಜಾನ್ ಮಾರಿಸ್ ಕ್ಲಾರ್ಕ್ (1884-1963), ಸಂಪ್ರದಾಯವಾದಿ ಅರ್ಥಶಾಸ್ತ್ರ ನಂಬುವ 'ಗ್ರಾಹಕ ಸಾರ್ವಭೌಮತ್ವ' ಎಂಬುದೇನಾದರೂ ಇದೆಯೇ ಎಂದು ಅದರ ಅಸ್ತಿತ್ವವನ್ನು ಪ್ರಶ್ನಿಸುತ್ತಾರೆ, ಅವರು 1918ರಲ್ಲಿ ಜರ್ನಲ್ ಆಫ್ ಪೊಲಿಟಿಕಲ್ ಎಕಾನಮಿ (Journal of Political Economy) ಎಂಬ ಪ್ರಬಂಧದಲ್ಲಿ, "ಪಾದರಕ್ಷೆಗಳ ರಬ್ಬರ್ ಹಿಮ್ಮಡಿಗಳು, ಟೆನ್ನಿಸ್ ಚೆಂಡುಗಳು, ಶಾಯಿ ಪೆನ್ನುಗಳು, ವಾಹನಗಳ ಚಕ್ರಗಳನ್ನು ಹೇಗೆ ಒಂದೇ ರೀತಿಯ ಕಚ್ಚಾ ರಬ್ಬರಿನಿಂದ ಮಾಡಿರುತ್ತಾರೆಯೋ ಹಾಗೆಯೇ, ನಿರ್ದಿಷ್ಟ ವಸ್ತುಗಳಿಗೆ ಇರುವ ಆರ್ಥಿಕ ಅಪೇಕ್ಷೆಗಳನ್ನು ಕೂಡ ಸರಳ ಮತ್ತು ಮೂಲಭೂತ ಕಚ್ಚಾ ವಸ್ತು (ಆದಿಮ ಪ್ರವೃತ್ತಿ)ಗಳಿಂದಲೇ ಮಾಡಿರುತ್ತಾರೆ. ಕಾರ್ಖಾನೆಗಳ ಯಂತ್ರಗಳು ಎರಡೂ ರೀತಿಯ ಉತ್ಪನ್ನಗಳನ್ನು ಉತ್ಪಾದನೆ ಮಾಡುತ್ತವೆ. ಒಂದೇ ಉದ್ಯಮ ಸಂಸ್ಥೆಯಲ್ಲಿ ಒಂದು ವಿಭಾಗವು ಬಯಕೆಗಳನ್ನು ಹುಟ್ಟುಹಾಕುತ್ತಿದ್ದರೆ, ಇನ್ನೊಂದು ವಿಭಾಗವು

ಅವುಗಳನ್ನು ಪೂರೈಸುವ ವ್ಯವಸ್ಥೆ ಮಾಡುತ್ತಿರುತ್ತದೆ," ಎಂದು ಬರೆಯುತ್ತಾರೆ. ಫ್ರಾಂಕ್ ಎಚ್. ನೈಟ್ (1885-1972)ರವರಂತಹ, ಸಾಮಾನ್ಯವಾಗಿ ಮುಖ್ಯವಾಹಿನಿಯ ಪ್ರಮುಖ ಪ್ರತಿನಿಧಿಯೆಂದು ಪರಿಗಣಿಸಲ್ಪಡುವ ಅರ್ಥಶಾಸ್ತ್ರಜ್ಞರು ಕೂಡ, ತಾವು 1934ರಲ್ಲಿ ಬರೆದ "ಸೋಷಿಯಲ್ ಸೈನ್ಸ್ ಅಂಡ್ ದಿ ಪೊಲಿಟಿಕಲ್ ಟ್ರೆಂಡ್ (Social science and the political trend)" ಎಂಬ ಪ್ರಬಂಧದಲ್ಲಿ, "ಗ್ರಾಹಕರ ಮೇಲೆ ಮಾರಾಟಗಾರರು ಬೀರುವ ಅತಿಯಾದ ಪ್ರಭಾವ ಮತ್ತು ಮನುಷ್ಯನ ಅಪೇಕ್ಷೆಗಳನ್ನು ಪೂರೈಸಲು ಸರಕುಗಳನ್ನು ಉತ್ಪಾದಿಸುವ ಬದಲು ಉತ್ಪಾದನೆಯಾದ ಸರಕುಗಳಿಗೆ ಗ್ರಾಹಕರಲ್ಲಿ ಅಪೇಕ್ಷೆಯನ್ನು ಹುಟ್ಟುಹಾಕುವಂತಹ, ನಮಗೆ ಸಾಮಾನ್ಯವಾಗಿ ಕಾಣಸಿಗುವ ಮಿತಿಮೀರಿದ ಪ್ರವೃತ್ತಿ'ಯ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. 'ಅಪೇಕ್ಷೆಗಳು ಅವುಗಳ ಮಾರುಕಟ್ಟೆ ಪೂರೈಕೆದಾರರಿಂದ ವ್ಯವಸ್ಥಿತವಾಗಿ ಪ್ರಭಾವಿತಗೊಳ್ಳುತ್ತಲೇ ಇದ್ದರೆ, ಬೇಡಿಕೆ ಮತ್ತು ಪೂರೈಕೆ ಪರಸ್ಪರ ಸ್ವತಂತ್ರವಾಗಿ ಇರಲು ಸಾಧ್ಯವಾಗುವುದಿಲ್ಲ. ಹಾಗಾಗಿ ಬೇಡಿಕೆ ಮತ್ತು ಪೂರೈಕೆ ಎಂಬ ಮಾರುಕಟ್ಟೆಯ ಕಾರಕ ಶಕ್ತಿಗಳ ಸ್ವಾಯತ್ತತೆ (autonomy of agents) ಎಂಬ ಮೂಲತತ್ವದ ಆಧಾರದ ಮೇಲೆ ನಿಂತಿರುವ ಸಿದ್ಧಾಂತಗಳ ವಿವರಣಾತ್ಮಕ ಮೌಲ್ಯವನ್ನು (ಕಲ್ಯಾಣ ಸಿದ್ಧಾಂತವನ್ನು ಒಳಗೊಂಡಂತೆ), ಪ್ರಶ್ನಿಸಬೇಕಾಗುತ್ತದೆ,' ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಸಾಂಸ್ಥಿಕ ಅರ್ಥಶಾಸ್ತ್ರವು ಇತರ ಹಲವು ಅಧ್ಯಯನ ಕ್ಷೇತ್ರಗಳನ್ನು ಮತ್ತು ಪರಿಕಲ್ಪನೆಗಳನ್ನು ಹುಟ್ಟುಹಾಕಿತು. ಉದಾಹರಣೆಗೆ, ಜಾನ್ ಆರ್. ಕಾಮನ್ಸ್ (1862-1945), ತಮ್ಮ ಲೀಗಲ್ ಫೌಂಡೇಷನ್ಸ್ ಆಫ್ ಕ್ಯಾಪಿಟಲಿಸಂ (Legal Foundations of Capitalism (1924) ಎಂಬ ಕೃತಿಯಲ್ಲಿ, ಆಸ್ತಿ ಹಕ್ಕುಗಳ ಪ್ರಾಮುಖ್ಯತೆ, ಸಾಮಾನ್ಯ ಕಾನೂನಿನ ಅಭಿವೃದ್ಧಿ, ಶಾಸಕಾಂಗಗಳು ಮತ್ತು ನ್ಯಾಯಾಲಯಗಳ ವರ್ತನೆ ಮತ್ತು ಸಾಂಸ್ಥಿಕ ರೂಪಗಳ ವಿಕಸನವನ್ನು ಕೇಂದ್ರವಾಗಿಟ್ಟುಕೊಂಡು, ಆರ್ಥಿಕತೆ ಮತ್ತು ಕಾನೂನು ವ್ಯವಸ್ಥೆಯ ನಡುವಿನ ಪರಸ್ಪರ ಸಂಬಂಧಗಳನ್ನು ಅಧ್ಯಯನ ಮಾಡಿದರು. 'ಆರ್ಥಿಕತೆ ಮತ್ತು ಸಮಾಜದೊಳಗೆ ಇರುವ ಸಂಘರ್ಷಾತ್ಮಕ ಹಿತಾಸಕ್ತಿಗಳು, ವಿಶೇಷವಾಗಿ ಉತ್ಪಾದನೆಯ ಮೂಲಭೂತ ಅಂಶಗಳಾದ ಶ್ರಮ (ಕಾರ್ಮಿಕ) ಮತ್ತು ಬಂಡವಾಳದ ನಡುವಿನ ಸಂಘರ್ಷ, ಮತ್ತು ವಿಭಿನ್ನ ಕಾನೂನು ಚೌಕಟ್ಟಿನಲ್ಲಿ ಇವುಗಳನ್ನು ಪರಿಹರಿಸುವ ವಿಧಾನಗಳು, ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಚಾಲನಾ ಶಕ್ತಿಗಳು,' ಎಂದು ಅವರು ಅಭಿಪ್ರಾಯಪಟ್ಟರು. ಅವರ ಪ್ರಕಾರ, ಸರಕಾರವು ವಿವಿಧ ಗುಂಪುಗಳ ನಡುವೆ ಮಧ್ಯವರ್ತಿಯಾಗಿ ಪ್ರಮುಖ ಪಾತ್ರ ವಹಿಸುತ್ತದೆ. ಉದಾಹರಣೆಗೆ, ಎಲ್ಲರಿಗೂ ಉದ್ಯೋಗದ ಹಕ್ಕನ್ನು ಕೊಡುವಂತಹ ಕಾನೂನು ರಚಿಸುವುದು ಮತ್ತು ಅದನ್ನು ಜಾರಿಗೊಳಿಸುವುದು. ಇನ್ಸಿಟ್ಯೂಷನಲ್ ಎಕಾನಾಮಿಕ್ಸ್: ಇಟ್ಸ್ ಪ್ಲೇಸ್ ಇನ್ ಪೊಲಿಟಿಕಲ್ ಎಕಾನಮಿ (Institutional

Economics: Its Place in Political Economy (1934) ಎಂಬ ಎರಡು ಸಂಪುಟಗಳಲ್ಲಿ ಪ್ರಕಟವಾದ ತಮ್ಮ ಕೃತಿಯಲ್ಲಿ ಕಾಮನ್ಸ್, ಸಾಂಸ್ಥಿಕ ಅರ್ಥಶಾಸ್ತ್ರ ಕುರಿತು ಎತ್ತಿದ್ದ ಪ್ರಶ್ನೆಗಳು, ಬಳಸಿದ ವಿಧಾನಗಳು ಮತ್ತು ಪಡೆದ ಫಲಿತಾಂಶಗಳನ್ನು ಇತರ ಪರ್ಯಾಯ ಚಿಂತನಾಧಾರೆಗಳೊಂದಿಗೆ ಹೋಲಿಸಿದ್ದಾರೆ. ಸಾಮೂಹಿಕ ಘಟಕಗಳಿಗಿಂತ ವೈಯಕ್ತಿಕ ಶ್ರಮ ಮತ್ತು ನಿರ್ಧಾರಗಳನ್ನು ವಿಶ್ಲೇಷಿಸುವ ಮೂಲಕ ಸಾಮಾಜಿಕ ವಿದ್ಯಮಾನಗಳನ್ನು ವಿವರಿಸುವ ವೈಧಾನಿಕ ವ್ಯಕ್ತಿವಾದ (methodological individualism)ದ ವಿರುದ್ಧ ಅವರು ಹೀಗೆಂದು ವಾದಿಸಿದರು: 'ಜನರು ಸ್ವಾಭಾವಿಕ ಸ್ಥಿತಿ (a state of nature)ಯಲ್ಲಿ ಇತರರಿಗಿಂತ ಪ್ರತ್ಯೇಕವಾಗಿ ಇರುವ ಬದಲು, ಯಾವಾಗಲೂ ಪರಸ್ಪರ ಕೊಡುಕೊಳ್ಳುವಿಕೆಯಲ್ಲಿ ತೊಡಗಿರುತ್ತಾರೆ. . . ಅವರು ತಮಗಿಂತ ಮೊದಲು ಇದ್ದ ಮತ್ತು ತಮ್ಮ ನಂತರವೂ ಇರುವ ಸಾಂಸ್ಥಿಕ ವ್ಯವಸ್ಥೆಯ ನಾಗರಿಕರಾಗಿರುತ್ತಾರೆ.' ಮುಂದುವರಿದು ಕಾಮನ್ಸ್, ' ಸಾಂಸ್ಥೀಕರಣಗೊಂಡ ಮನಸ್ಸುಗಳ ಕಾರಕ ಶಕ್ತಿಗಳ ಬಗ್ಗೆ ಮಾತನಾಡುತ್ತಾರೆ. ಕಾಮನ್ಸ್ ಅವರನ್ನು ಕಾನೂನು ಮತ್ತು ಅರ್ಥಶಾಸ್ತ್ರ ಕ್ಷೇತ್ರದ ಸಂಸ್ಥಾಪಕರಲ್ಲೊಬ್ಬರೆಂದು ಪರಿಗಣಿಸಲಾಗಿದೆ.

ಅಮೆರಿಕನ್ ಅರ್ಥಶಾಸ್ತ್ರಜ್ಞರಾದ ಅಡಾಲ್ಫ್ ಎ. ಬರ್ಲಿ (1895-1971) ಮತ್ತು ಗಾರ್ಡಿನರ್ ಮೀನ್ಸ್ (1896-1988) 1932ರಲ್ಲಿ ದಿ ಮಾಡರ್ನ್ ಕಾರ್ಪೋರೇಷನ್ ಅಂಡ್ ಪ್ರೈವೇಟ್ ಪ್ರಾಪರ್ಟಿ (The Modern Corporation and Private Property) ಎಂಬ ಕೃತಿ ಪ್ರಕಟಿಸಿದರು. ಇದರಲ್ಲಿ ಅವರು ಉತ್ತರ ಅಮೇರಿಕಾ ದೇಶದಲ್ಲಿ ದೊಡ್ಡ ವ್ಯಾಪಾರೋದ್ಯಮ ಸಂಸ್ಥೆಗಳು ಹೇಗೆ ಬೆಳೆದವು ಎಂಬುದನ್ನು, ವಿಶೇಷವಾಗಿ ಕಾನೂನಾತ್ಮಕ ದೃಷ್ಟಿಕೋನದಿಂದ ವಿಶ್ಲೇಷಿಸಿದ್ದಾರೆ. (ಅವರು ಉತ್ತರ ಅಮೇರಿಕಾದಲ್ಲಿ ಸಾಂಸ್ಥಿಕ ಕಾನೂನು ಯಾವ ರೀತಿಯಾಗಿ ಸಂಸ್ಥೆಗಳ ಮಾಲೀಕತ್ವ ಮತ್ತು ನಿಯಂತ್ರಣವನ್ನು ಪ್ರತ್ಯೇಕಿಸಲು ಮತ್ತು ಸಂಸ್ಥೆಗಳ ಪ್ರಮುಖರ (ಷೇರುದಾರರ) ಗುರಿಗಳು ಮತ್ತು ಅದರ ಕಾರ್ಯಭಾರಿಗಳ ಗುರಿಗಳಿಗಿಂತ ಭಿನ್ನವಾದಾಗ ಉಂಟಾಗುವ ಸಮಸ್ಯೆ (principal-agent problem) ಗಳನ್ನು ಪರಿಹರಿಸುವ ನಿಯಮಗಳನ್ನು ಹೇಗೆ ಅಭಿವೃದ್ಧಿಪಡಿಸಿತು ಎಂಬುದನ್ನು ತೋರಿಸಿದರು. ಈ ಕೃತಿಯನ್ನು ಸಾಂಸ್ಥಿಕ ಆಡಳಿತ ಮತ್ತು ಸಾಂಸ್ಥಿಕ ಅರ್ಥಶಾಸ್ತ್ರದ ಮೂಲಭೂತ ಕೃತಿಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.

ವೆಬ್ಲೆನ್ ಅವರ ವಿದ್ಯಾರ್ಥಿಯಾಗಿದ್ದ ವೆಸ್ಲಿ ಕ್ಲೇರ್ ಮಿಚೆಲ್ (1874-1948), ಆ ಕಾಲದ ಅತ್ಯಗತ್ಯವಾದ ಆರ್ಥಿಕ ನೀತಿಗಳ ಸಾಧನಗಳನ್ನು ವಿವೇಚನೆಯಿಂದ ಬಳಸಿ ಎದುರಿಸಬೇಕಾಗಿದ್ದ ಪ್ರಮುಖ ಸಮಸ್ಯೆಗಳಲ್ಲಿ ಒಂದಾಗಿದ್ದ, ಮುಖ್ಯವಾಗಿ ವ್ಯಾಪಾರ ಚಕ್ರವನ್ನು (business cycles) ಅರ್ಥಮಾಡಿಕೊಂಡು ಅದನ್ನು ಕುರಿತು ಸಂಶೋಧನೆ ನಡೆಸಿದರು; ಅವರ ಬಿಜಿನೆಸ್ ಸೈಕಲ್ಸ್

ಅಂಡ್ ದೆರ್ ಕಾಸಸ್ (Business Cycles and Their Causes (1913) ನೋಡಿ. 'ವ್ಯಾಪಾರ ಚಕ್ರಗಳ ವಿವರಣೆಯನ್ನು ತಾತ್ಕಾಲಿಕ ಮತ್ತು ಸಂಶಯಾಸ್ಪದವಾದ ಮನಶಾಸ್ತ್ರದ ಸಿದ್ಧತತ್ವ (psychological axioms)ಗಳಿಂದ ಪ್ರಾರಂಭಿಸಬಾರದು, ಬದಲಿಗೆ ಅನುಭವಾತ್ಮಕ ತಥ್ಯಾಂಶಗಳು (empirical facts), ವ್ಯಾಪಾರ ಸಮೃದ್ಧಿ, ಆರ್ಥಿಕ ಬಿಕ್ಕಟ್ಟು, ಆರ್ಥಿಕ ಕುಸಿತ ಮತ್ತು ಆರ್ಥಿಕ ಪುನರುಜ್ಜೀವನದ ಪುನರಾವರ್ತಿತ ಮಾದರಿಗಳನ್ನು ಆಧಾರವಾಗಿಟ್ಟುಕೊಂಡು ಪ್ರಾರಂಭಿಸಬೇಕು,' ಎಂದು ಮಿಚೆಲ್ ನಂಬಿದ್ದರು. ಎಲ್ಲಕ್ಕಿಂತ ಮೊದಲು ಮಾಡಬೇಕಾಗಿದ್ದುದು, ಪರಿಗಣನೆಗೆ ತೆಗೆದುಕೊಂಡಿರುವ ವಿದ್ಯಮಾನಗಳನ್ನು ಗಮನಿಸುವುದು, ವಿಶ್ಲೇಷಿಸುವುದು ಮತ್ತು ವ್ಯವಸ್ಥಿತಗೊಳಿಸುವುದು. ವ್ಯಾಪಾರ ಚಕ್ರಗಳು ಬಂಡವಾಳಶಾಹಿಗೆ ಅಂತರ್ವರ್ಧಕವಾಗಿದ್ದು, ಅವುಗಳು ಆಂತರಿಕ ಕ್ರಿಯಾಶೀಲತೆಯನ್ನು ಪ್ರತಿಫಲಿಸುತ್ತವೆ, ಎಂಬುದು ಮಿಚೆಲ್ ಅಭಿಪ್ರಾಯವಾಗಿತ್ತು. ಇದೇ ರೀತಿಯ ಅಭಿಪ್ರಾಯಗಳನ್ನು ಮಿಚೆಲ್ ನಿಕಟ ಸಂಪರ್ಕದಲ್ಲಿದ್ದ ಜರ್ಮನಿಯ ಆರ್ಥರ್ ಸ್ಪೀಥೋಫ್ (1873-1957) ಕೂಡ ಮುಂದಿಟ್ಟಿದ್ದರು ಮತ್ತು ಶಂಪೀಟರ್ ಅವರು ತಮ್ಮ ದಿ ಥಿಯರಿ ಆಫ್ ಎಕಾನಾಮಿಕ್ ಡೆವಲೆಂಪ್ಮೆಂಟ್‌ನಲ್ಲಿ (The Theory of Economic Developmentನಲ್ಲಿ (ಅಧ್ಯಾಯ 8 ನೋಡಿ) ಕೂಡ ಇದೇ ಅಭಿಪ್ರಾಯವನ್ನು ಮಂಡಿಸಿದ್ದರು. ಮಿಚೆಲ್ ಅವರು ನ್ಯಾಷನಲ್ ಬ್ಯೂರೋ ಆಫ್ ಎಕನಾಮಿಕ್ ರಿಸರ್ಚ್ (1920 ರಲ್ಲಿ ಸ್ಥಾಪನೆ)ನ ಸಂಸ್ಥಾಪಕರು ಮತ್ತು ದೀರ್ಘಾವಧಿ ಸಂಶೋಧನಾ ನಿರ್ದೇಶಕರಲ್ಲಿ ಒಬ್ಬರಾಗಿದ್ದಾರೆ. ಇದು ಇತರ ಅನೇಕ ಅರ್ಥಶಾಸ್ತ್ರ ಸಂಶೋಧನಾ ಸಂಸ್ಥೆಗಳಿಗೆ ಮಾದರಿಯಾಗಿದೆ.

ಇನ್ನೂ ಮುಂದೆ ನಾವು, ಪೈಪೋಟಿಯ ಅಪರಿಪೂರ್ಣ ಮತ್ತು ಏಕಸ್ವಾಮ್ಯದ ಸ್ವರೂಪಗಳೊಂದಿಗೆ ವ್ಯವಹರಿಸುವ ಆರ್ಥಿಕ ಸಿದ್ಧಾಂತಗಳ ಬೆಳವಣಿಗೆಗಳತ್ತ ಗಮನಹರಿಸೋಣ.

**ಏಕಸ್ವಾಮ್ಯದ ಪೈಪೋಟಿ**

ತಮ್ಮ 1926ರ ಲೇಖನ, ದಿ ಲಾ ಸ್ ಆಫ್ ರಿಟರ್ನ್ಸ್ ಅಂಡರ್ ಕಾಂಪಿಟೇಟೀವ್ ಕಂಡಿಷನ್ಸ್ (The Laws of Returns Under Competitive Conditions) ನಲ್ಲಿ ಸ್ರಾಫ್, 'ನಾವು 'ಪರಿಪೂರ್ಣ ಪೈಪೋಟಿ' ಎಂದು ವ್ಯಾಪಕವಾಗಿ ಮಾಡುವ ಊಹೆಯು ಪ್ರಾಯೋಗಿಕವಾಗಿ ಅಸಮರ್ಥನೀಯ,' ಎಂಬ ಅಂಶದತ್ತ ಗಮನ ಸೆಳೆದರು. 'ಸರಕಿನ ಗುಣಮಟ್ಟ, ಅದನ್ನು ಮಾರಾಟ ಮಾಡುವ ರೀತಿ (ಪ್ಯಾಕೇಜಿಂಗ್), ಗ್ರಾಹಕ ಸೇವೆ ಮತ್ತು ಮಾರಾಟ ಸ್ಥಳ, ಇತ್ಯಾದಿ ಅಂಶಗಳು ಸೇರಿದಂತೆ ವ್ಯಾಪಾರ ವಹಿವಾಟಿನ ಸಂಸ್ಥೆಗಳು ಹಲವಾರು ಆಯಾಮಗಳಲ್ಲಿ ಒಂದಕ್ಕಿಂತ ಇನ್ನೊಂದು

ಭಿನ್ನವಾಗಿರುತ್ತವೆ ಮತ್ತು ವಾಸ್ತವದಲ್ಲಿ ಈ ಭಿನ್ನತೆಗಳನ್ನು ಬಳಸಿಕೊಂಡು ತಮ್ಮ ಪ್ರತಿಸ್ಪರ್ಧಿಗಳಿಗಿಂತ  ತಮ್ಮನ್ನು ವಿಶಿಷ್ಟವಾಗಿ ತೋರಿಸಿಕೊಳ್ಳಲು ಉತ್ಸುಕರಾಗಿರುತ್ತಾರೆ. ಈ ರೀತಿಯಾಗಿ ಅವರು ಸ್ವಲ್ಪಮಟ್ಟಿನ ಏಕಸ್ವಾಮ್ಯದ ಸ್ಥಾನವನ್ನು ಹೊಂದಲು ಹವಣಿಸುತ್ತಾರೆ,' ಎಂದು ಅವರು ಹೇಳುತ್ತಾರೆ.  ಹಾಗಾಗಿ, ಪರಿಪೂರ್ಣ ಪೈಪೋಟಿಯ ಸಿದ್ಧಾಂತ ಪ್ರತಿಪಾದಿಸುವಂತೆ, ಒಂದು ಉದ್ಯಮ ಸಂಸ್ಥೆಯು ತನ್ನ ಸರಕಿನ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದರೆ ಅದು ತನ್ನ ಎಲ್ಲ ಗ್ರಾಹಕರನ್ನು ತಕ್ಷಣವೇ ಕಳೆದುಕೊಳ್ಳುವುದಿಲ್ಲ ಅಥವಾ ಬೆಲೆಯನ್ನು ಸ್ವಲ್ಪ ಕಡಿಮೆ ಮಾಡಿದರೆ ಅದು ಇಡೀ ಮಾರುಕಟ್ಟೆಯನ್ನು ಆಕ್ರಮಿಸುವುದಿಲ್ಲ. ಒಂದು ಮಿತಿಯೊಳಗೆ ಒಂದು ಉದ್ಯಮ ಸಂಸ್ಥೆಯು ಮಾರುಕಟ್ಟೆಯಿಂದ ಹೊರತಳ್ಳಲ್ಪಡದೆ ತನ್ನ ವಸ್ತುಗಳ ಬೆಲೆಯನ್ನು ನಿರ್ಧರಿಸಬಹುದು. ಪರಿಪೂರ್ಣ ಸ್ಪರ್ಧೆಯ ಮಾದರಿಯು, ಸಂಸ್ಥೆಗಳಿಗೆ ಯಾವುದೇ ಆರ್ಥಿಕ ಶಕ್ತಿ ಇರುವುದಿಲ್ಲ, ಹಾಗಾಗಿ ಅವುಗಳು ಮಾರುಕಟ್ಟೆಯಲ್ಲಿ ಸರಕಿಗೆ ಇರುವ ಬೆಲೆಯನ್ನು ಹಾಗೆಯೇ ಒಪ್ಪಿಕೊಳ್ಳಬೇಕಾಗುತ್ತದೆ, (ಅಂದರೆ, ಅವರು "ಬೆಲೆ ಒಪ್ಪಿಕೊಳ್ಳುವವರು") ಎಂದು ಅಂದುಕೊಳ್ಳುತ್ತದೆ. ಏಕಸ್ವಾಮ್ಯ ಪೈಪೋಟಿಯ ಮಾದರಿಗಳ ಪ್ರಕಾರ, ಉದ್ಯಮ ಸಂಸ್ಥೆಗಳು ಬೆಲೆಗಳನ್ನು ನಿಗದಿಪಡಿಸುವಲ್ಲಿ ಹೆಚ್ಚು ಕಮ್ಮಿ ಸಾಮರ್ಥ್ಯ ಹೊಂದಿವೆ; ಅಂದರೆ  ಅವರು "ಬೆಲೆ ನಿಗದಿಕಾರರು". (ಪರಿಪೂರ್ಣ ಸ್ಪರ್ಧೆಯ ಮಾದರಿಯಲ್ಲಿ ಹೇಳುವಂತೆ ಎಲ್ಲಾ ಉದ್ಯಮ ಸಂಸ್ಥೆಗಳು ಮಾರುಕಟ್ಟೆ ಬೆಲೆಯನ್ನು ಇದ್ದಂತೆಯೇ ಸ್ವೀಕರಿಸುವವರಾಗಿದ್ದರೆ, ಮಾರುಕಟ್ಟೆಯಲ್ಲಿ ಬೆಲೆಯನ್ನು ಮೊದಲಿಗೆ ಹೇಗೆ ನಿರ್ಧರಿಸಲಾಗುತ್ತದೆ ಎಂಬ ಪ್ರಶ್ನೆಗೆ ಇಲ್ಲಿ ಉತ್ತರ ಸಿಗುವುದಿಲ್ಲ.)

ಸ್ರಾಫಾ ಅವರು  1926ರಲ್ಲಿ ಬರೆದ ಲೇಖನವು ಏಕಸ್ವಾಮ್ಯ ಪೈಪೋಟಿಯ ಸಿದ್ಧಾಂತದ ಬೆಳವಣಿಗೆಯನ್ನು ಘೋಷಿಸಿತು. ಹೆರಾಲ್ಡ್ ಹೊಟೇಲ್ಲಿಂಗ್ (1895-1973), ತಮ್ಮ 1929ರಲ್ಲಿ ಬರೆದ ಸ್ಟೆಬಿಲಿಟಿ ಇನ್ ಕಾಂಪಿಟೇಷನ್  ('Stability in Competition,)  ಎಂಬ ಲೇಖನದಲ್ಲಿ ಇದರ ಒಂದು ಆಯಾಮದ ಮೇಲೆ ಗಮನ ಕೇಂದ್ರೀಕರಿಸಿದರು: ಉದ್ಯಮ ಸಂಸ್ಥೆಗಳ ದೈಶಿಕ ಸ್ಥಾನ (the location of firms in space), ಅಂದರೆ ಉದ್ಯಮ ಸಂಸ್ಥೆಗಳು ಯಾವ ಪ್ರದೇಶದಲ್ಲಿವೆ ಮತ್ತು ಅದರ ಪರಿಣಾಮಗಳು ಏನು ಎಂಬುದರ ಅನ್ವೇಷಣೆ. ಆರ್ಥಿಕ ಚಟುವಟಿಕೆಯ ಪ್ರಾದೇಶಿಕ ಆಯಾಮವನ್ನು ಗಂಭೀರವಾಗಿ ಪರಿಗಣಿಸುವುದರಿಂದ ನಮಗೆ ಪೈಪೋಟಿಯಲ್ಲಿ ಕಾಣಸಿಗುವ ಏಕಸ್ವಾಮ್ಯದ ಅಂಶಗಳ ಪ್ರತಿಪಾದನೆಗೆ ತಕ್ಷಣದ ಬೆಂಬಲ ದೊರೆಯುತ್ತದೆ, ಏಕೆಂದರೆ ಉದ್ಯಮ ಸಂಸ್ಥೆಗಳು ವಿಭಿನ್ನ ಭೌಗೋಳಿಕ ಸ್ಥಳಾವಕಾಶಗಳನ್ನು ಆಕ್ರಮಿಸದೆ ಬೇರೆ ದಾರಿಯಿಲ್ಲ (ಅಧ್ಯಾಯ 12 ರಲ್ಲಿ ಸಾಮಾನ್ಯ ಸಮತೋಲನ ಸಿದ್ಧಾಂತ (general equilibrium theory)ದಲ್ಲಿ ಪ್ರತಿಪಾದಿಸಲಾದ ಸ್ಪರ್ಧಾತ್ಮಕ ಕಾರ್ಯವಿಧಾನದ ಬಗ್ಗೆ ಡೇವಿಡ್ ಸ್ಟಾರೆಟ್ ಮಾಡುವ ವಿಮರ್ಶೆಯಲ್ಲಿ ನಮಗೆ ಇದರ

ಇನ್ನೊಂದು ನಿರೂಪಣೆ ದೊರಕುತ್ತದೆ). ಗ್ರಾಹಕರೊಂದಿಗೆ ಹೆಚ್ಚಿನ ದೇಶಿಕ ಸಾಮೀಪ್ಯ ಇರುವ ಉದ್ಯಮ ಸಂಸ್ಥೆಗಳಿಗೆ, ಸ್ಪರ್ಧಾತ್ಮಕವಾಗಿ ಹೆಚ್ಚಿನ ಆದ್ಯತೆ ದೊರಕುತ್ತದೆ, ಎಂದು ಹೋಟೆಲ್ಲಿಂಗ್ ಒತ್ತಿಹೇಳುತ್ತಾರೆ. ಆದರೂ, ಕೆಲವೊಂದು ಸ್ಪಷ್ಟ ಮತ್ತು ನಿರ್ದಿಷ್ಟ ಸಂದರ್ಭಗಳಲ್ಲಿ ಉದ್ಯಮ ಸಂಸ್ಥೆಗಳು ತಮ್ಮ ಸರಕುಗಳನ್ನು ತಮ್ಮ ಪ್ರತಿಸ್ಪರ್ಧಿಗಳಿಂದ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಪ್ರಮಾಣದಲ್ಲಿ ಪ್ರತ್ಯೇಕಿಸುವುದು ಒಂದು ತಾರ್ಕಿಕವಾದ ನಡೆ ಎಂದು ವಾದಿಸಲು ಇರುವ ಕಾರಣವನ್ನು ಅವರು ಮನಗಾಣುತ್ತಾರೆ. ಅವರ ಮನಸ್ಸಿನಲ್ಲಿದ್ದ ಸಂದರ್ಭ ಎಂದರೆ, ಉದಾಹರಣೆಗೆ, ಗ್ರಾಹಕರು ಸಮಾನವಾಗಿ ಹಂಚಿಕೆಯಾಗುವ, ನಗರದ ಒಂದು ನಿರ್ದಿಷ್ಟ ಉದ್ದದ ಮುಖ್ಯ ಬೀದಿಯಲ್ಲಿ ಇರುವ ಎರಡು ಅಂಗಡಿಗಳ ನಡುವಿನ ಪೈಪೋಟಿ. ಇಬ್ಬರೂ ಅಂಗಡಿಯವರಿಗೆ ತಮಗೆ ಅನುಕೂಲವಾಗುವ ಸ್ಥಳವನ್ನು ಆರಿಸುವ ಅವಕಾಶ ಇದ್ದರೆ, ಬಹುಶಃ ಅವರು ಮುಖ್ಯ ರಸ್ತೆಯ ಮಧ್ಯಭಾಗದಲ್ಲಿ ಬರುವಂತೆ, ಪರಸ್ಪರ ಅಕ್ಕಪಕ್ಕ ಅಂಗಡಿ ಹಾಕಬಹುದು. ಸರಕುಗಳ ಕನಿಷ್ಠ ವ್ಯತ್ಯಾಸದ ಪರಿಣಾಮ (the result of minimum product differentiation)ವನ್ನು 'ಹೋಟೆಲಿಂಗ್ ನ ನಿಯಮ' (Hotelling's law) ಎಂದೂ ಕರೆಯುತ್ತಾರೆ. ಆದಾಗ್ಯೂ, ಈ ಊಹೆಯನ್ನು ಬದಲಾಯಿಸಿ ನೋಡುವುದಾದರೆ, ಸ್ಪರ್ಧಾತ್ಮಕ ಒತ್ತಡವನ್ನು ಕಡಿಮೆ ಮಾಡಿಕೊಂಡು, ಪ್ರತಿಸ್ಪರ್ಧಿಗಳಿಗಿಂತ ಹೆಚ್ಚು ಅಥವಾ ಕಡಿಮೆ ಅಂತರದಲ್ಲಿ ತಮ್ಮ ಅಂಗಡಿಗಳನ್ನು ಹಾಕಲು ಸಾಧ್ಯವಾಗುವಂತೆ, ತಮ್ಮ ಸರಕುಗಳನ್ನು ಇತರರಿಗಿಂತ ವಿಶಿಷ್ಟವಾಗಿ ತಯಾರಿಸಲು ಉದ್ಯಮಗಳಿಗೆ ಇರುವ ಕಾರಣಗಳನ್ನು, ಉತ್ತೇಜನಗಳನ್ನು ನಾವು ನೋಡುತ್ತೇವೆ.

ಏಕಸ್ವಾಮ್ಯ ಪೈಪೋಟಿಯ ಸಿದ್ಧಾಂತದ ಬಗ್ಗೆ ಅಮೇರಿಕನ್ ಅರ್ಥಶಾಸ್ತ್ರಜ್ಞ ಎಡ್ವರ್ಡ್ ಚೇಂಬರ್ಲಿನ್ (1899-1967), 1933ರಲ್ಲಿ ಬರೆದ ಥಿಯರಿ ಆಫ್ ಮೊನೊಪೊಲಿಸ್ಟಿಕ್ ಕಾಂಪಿಟೇಷನ್ (Theory of Monopolistic Competition) ಎಂಬ ಕೃತಿಯಲ್ಲಿ, ಈ ಮೇಲಿನ ವಾದದ ಎಳೆಗಳನ್ನು ಎತ್ತಿಕೊಂಡು, ಮಾರುಕಟ್ಟೆಯಲ್ಲಿ ಉದ್ಯಮ ಸಂಸ್ಥೆಗಳು ಸಂಪೂರ್ಣವಾಗಿ ಒಂದೇ ರೀತಿ ಇರುವ ಉತ್ಪನ್ನಗಳನ್ನು ಉತ್ಪಾದಿಸುವುದಿಲ್ಲ, ಬದಲಿಗೆ ಒಂದನ್ನೊಂದು ಬಹಳವಾಗಿ ಹೋಲುವಂತಹ ಉತ್ಪನ್ನಗಳನ್ನು ಉತ್ಪಾದಿಸುತ್ತಾರೆ ಎಂದು ಪ್ರತಿಪಾದಿಸಿದರು. ಆದ್ದರಿಂದ, ಇವು ಪ್ರತಿಯೊಂದು ಕೂಡ ಸಾಕಷ್ಟು ಮಟ್ಟಿಗೆ ಏಕಸ್ವಾಮ್ಯಗಳೆಂದೇ ಹೇಳಬಹುದು. ಅವುಗಳ ಏಕಸ್ವಾಮ್ಯ ಯಾವ ಮಟ್ಟಿಗೆ ಇದೆ ಎಂಬುದು ನಮಗೆ ಗೊತ್ತಾಗುವುದು ಅವುಗಳ ಮಾರುಕಟ್ಟೆ ಬೆಲೆಯಲ್ಲಿ ಹೆಚ್ಚು ಕಡಿಮೆ ಆದಾಗ, ಈ ಉತ್ಪನ್ನಕ್ಕೆ ಮಾರುಕಟ್ಟೆಯಲ್ಲಿರುವ ಬೇಡಿಕೆಯಲ್ಲಿ ಯಾವ ಪ್ರಮಾಣದ ಬದಲಾವಣೆ ಆಗುತ್ತದೆ ಎಂಬುದರ ಆಧಾರದ ಮೇಲೆ; ಅಂದರೆ ನಿರ್ದಿಷ್ಟ ಉದ್ಯಮದ ಸರಕುಗಳಿಗೆ ಇರುವ ಬೇಡಿಕೆಯ ರೇಖೆಯು ಮೇಲೇರುತ್ತದೆಯೋ ಅಥವಾ ನೆಲಕಚ್ಚುತ್ತದೆಯೋ ಎಂಬುದನ್ನು ನೋಡಬೇಕಾಗುತ್ತದೆ.

ಉದ್ಯಮ ಸಂಸ್ಥೆಗಳು ಏಕಸ್ವಾಮ್ಯದ ಲಾಭದ ಗರಿಷ್ಠೀಕರಣ (rule of profit maximization)ದ ನಿಯಮವನ್ನು (ಕನಿಷ್ಠ ಆದಾಯ = ಕನಿಷ್ಠ ವೆಚ್ಚ) ಪಾಲಿಸುತ್ತವೆ. ತಮ್ಮ ಸರಕನ್ನು ಪ್ರತಿಸ್ಪರ್ಧಿಗಿಂತ ವಿಶಿಷ್ಟವಾಗಿ ತೋರಿಸಿ, ಅವರು ತಮ್ಮ ಮಾರುಕಟ್ಟೆ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಲು ಹವಣಿಸುತ್ತಾರೆ. ಅದೇ ವರ್ಷ, ಬ್ರಿಟಿಷ್ ಅರ್ಥಶಾಸ್ತ್ರಜ್ಞೆ ಜೋಆನ್ ರಾಬಿನ್ಸನ್ ಅಪರಿಪೂರ್ಣ ಪೈಪೋಟಿಯ ಅರ್ಥಶಾಸ್ತ್ರದ ಕುರಿತು ಎಕಾನಾಮಿಕ್ಸ್ ಆಫ್ ಇಂಪರ್ಫೆಕ್ಟ್ ಕಾಂಪಿಟೇಷನ್ (Economics of Imperfect Competition) ಎಂಬ ಕೃತಿಯನ್ನು ಪ್ರಕಟಿಸಿದರು. ಆಕೆಯು ನಿರ್ದಿಷ್ಟವಾಗಿ ಬೆಲೆ ತಾರತಮ್ಯದ ಕುರಿತು ಅಧ್ಯಯನ ಕೈಗೊಂಡಿದ್ದರು. ತನ್ನ ಒಂದು ಉತ್ಪನ್ನವನ್ನು ಹಲವು ಪ್ರತ್ಯೇಕ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಬಲ್ಲಂತಹ ಏಕಸ್ವಾಮ್ಯಕಾರನೊಬ್ಬನು ತನ್ನ ಉತ್ಪನ್ನಕ್ಕೆ ಬೇರೆ ಬೇರೆ ಕಡೆ ಬೇರೆ ಬೇರೆ ಬೆಲೆ ನಿಗದಿ ಮಾಡಬಹುದು ಮತ್ತು ಈ ಪ್ರತಿಯೊಂದು ಮಾರುಕಟ್ಟೆಯಲ್ಲೂ ಈ ನಿಗದಿತ ಬೆಲೆಗಳು ಆಯಾ ಮಾರುಕಟ್ಟೆಯಲ್ಲಿ ಏಕಸ್ವಾಮ್ಯದ ಲಾಭ ಗರಿಷ್ಠೀಕರಣದ ನಿಯಮವನ್ನು ಪಾಲಿಸುತ್ತವೆ (ಒಂದು ಮಾರುಕಟ್ಟೆಯಲ್ಲಿ ಉತ್ಪನ್ನವೊಂದರ ಬೆಲೆಯಲ್ಲಿ ಬದಲಾವಣೆ ಆದಾಗ, ಅದಕ್ಕಿರುವ ಬೇಡಿಕೆಯಲ್ಲಿ ಹೆಚ್ಚೇನೂ ಬದಲಾವಣೆ ಆಗದಿದ್ದಾಗ, ಉದ್ಯಮ ಸಂಸ್ಥೆಯು ಆ ಉತ್ಪನ್ನದ ಬೆಲೆಯನ್ನು, ಅಲ್ಲಿ ಹೆಚ್ಚು ಮಾಡುತ್ತದೆ).

### ಅಲ್ಪಸಂಖ್ಯಾಸ್ವಾಮ್ಯಗಳ ನಡುವಿನ ಪೈಪೋಟಿ

ಏಕಸ್ವಾಮ್ಯದ ಈ ಸಿದ್ಧಾಂತಗಳು ಬೆಳೆಯತೊಡಗಿದಂತೆ, ಆರ್ಥಿಕ ಚಿಂತಕರ ಗಮನವು ಹೆಚ್ಚೆಚ್ಚಾಗಿ, ಕೇವಲ ಕೆಲವೇ ಮಂದಿ ಉತ್ಪಾದಕರು ಮತ್ತು ಮಾರಾಟಗಾರರ ಹಿಡಿತದಲ್ಲಿರುವ ಅಲ್ಪಸಂಖ್ಯಾ ಸ್ವಾಮ್ಯದ (oligopolies) ಕಡೆಗೆ ಹೊರಳಿತು. ಇಲ್ಲಿ ವರ್ತನಾ ತಂತ್ರಗಾರಿಕೆಯ ಮೇಲೆ ಗಮನ ಇಡಲಾಗಿದೆ: ಒಂದು ಉದ್ಯಮ ಸಂಸ್ಥೆಯು ತನ್ನ ಉತ್ಪನ್ನದ ಬೆಲೆಯನ್ನು ಬದಲಾಯಿಸುವ ಸಂದರ್ಭದಲ್ಲಿ, ಅದಕ್ಕೆ ಮಾರುಕಟ್ಟೆಯಲ್ಲಿ ತನ್ನ ಪ್ರತಿಸ್ಪರ್ಧಿಗಳು ಹೇಗೆ ಪ್ರತಿಕ್ರಿಯಿಸಬಹುದು ಎಂಬುದನ್ನು ಪರಿಗಣಿಸಬೇಕಾಗುತ್ತದೆ, ಮತ್ತು ಈ ಪರಿಗಣನೆಯ ಆಧಾರದ ಮೇಲೆ ಅದು ತನ್ನ ವರ್ತನೆಯಲ್ಲಿ ಬದಲಾವಣೆ ತರಬಹುದು. ಈ ಪಾರಸ್ಪರಿಕ ಕ್ರಿಯೆ ಹೀಗೆ ಮುಂದುವರಿಯುತ್ತದೆ. ಈ ಪ್ರಕ್ರಿಯೆಯು ಸ್ಥಿರತೆಗೆ ಅಥವಾ ಮಾರುಕಟ್ಟೆ ಸಮತೋಲನಕ್ಕೆ ದಾರಿಮಾಡಿಕೊಡುತ್ತದೆಯೇ ಅಥವಾ ವಿನಾಶಕಾರಿ ಹೋರಾಟದ ಮಟ್ಟಕ್ಕೆ ಇಳಿಯುತ್ತದೆಯೋ ಎಂಬುದು ಪ್ರಶ್ನೆ.

ಅರ್ಥಶಾಸ್ತ್ರಜ್ಞರಿಗೆ ಈ ಪ್ರಶ್ನೆ ಎದುರಾದದ್ದು ಇದೇ ಮೊದಲಲ್ಲ. ಫ್ರೆಂಚ್ ಅರ್ಥಶಾಸ್ತ್ರಜ್ಞರಾದ ಜೋಸೆಫ್-ಲೂಯಿ-ಫ್ರಾನ್ಸ್ವಾ ಬರ್ಟ್ರಾಂಡ್ (1822-1900) ಅವರು ಆಂತ್ವಾನ್ -ಆಗಸ್ಟಿನ್ ಕೂರ್ನೋ ಅವರ 1838ರ ಕೃತಿ, ರೊಷೆಯೂಸ್ ಸುಆರ್ ಲೇ ಪ್ರಿನ್ಸಿಪೀಸ್ ಮೆಥ್ ಮೆಥೀಕ್ ಡುಅಲಾ ಥಿಓಇ ದೆ ರಿಷೆಸ್ (Recherches sur les principes mathématiques de la théorie des richesses-ಫ್ರೆಂಚ್- (Researches into the mathematical principles of the theory of wealth)ವನ್ನು ವಿಮರ್ಶಿಸುತ್ತಾ, ಸರಕುಗಳ ಉತ್ಪಾದನೆ ಮತ್ತು ಮಾರಾಟ ಕೇವಲ ಇಬ್ಬರು ಉದ್ದಿಮೆದಾರರ ಹತೋಟಿಯಲ್ಲಿರುವ ದ್ವಿಜನಸ್ವಾಮ್ಯದ (duopoly) ಬಗ್ಗೆ ಕೂರ್ನೋ ಅವರ ನಿಲುವನ್ನು ಟೀಕಿಸುತ್ತಾರೆ. 'ತಾನು ತೆಗೆದುಕೊಳ್ಳುವ ನಿರ್ಧಾರಗಳಿಗೆ ತನ್ನ ಪ್ರತಿಸ್ಪರ್ಧಿ ಹೇಗೆ ಪ್ರತಿಕ್ರಿಯಿಸಬಹುದು ಎಂಬುದನ್ನು ಮುಂದಾಲೋಚಿಸುತ್ತಾ, ಎರಡೂ ಉದ್ಯಮ ಸಂಸ್ಥೆಗಳು ಚಾತುರ್ಯದಿಂದ ಕಾರ್ಯನಿರ್ವಹಿಸುತ್ತವೆ,' ಎಂಬ ಊಹೆಯ ಮೇಲೆ ಕೂರ್ನೋ ತಮ್ಮ ವಾದವನ್ನುಬೆಳೆಸಿದ್ದರು. ಈ ಎರಡು ಉದ್ಯಮ ಸಂಸ್ಥೆಗಳು ತಮ್ಮ ನಿರೀಕ್ಷೆಗನುಗುಣವಾಗಿ, ಏಕಕಾಲಕ್ಕೆ ಮತ್ತು ಸ್ವತಂತ್ರವಾಗಿ ತಾವು ಮಾರುಕಟ್ಟೆಗೆ ಬಿಡುಗಡೆಮಾಡಬೇಕಾದ ಸರಕುಗಳ ಪ್ರಮಾಣಗಳನ್ನು ನಿರ್ಧರಿಸುತ್ತಾರೆ (ಅವರು ಸರಕುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಮಾರುಕಟ್ಟೆಯಲ್ಲಿ ಅವರು ಪಡೆಯುವ ಬೆಲೆಯ ಮೇಲೆ ಪರಿಣಾಮ ಬೀರುತ್ತವೆ. ಅವರ ನಿರೀಕ್ಷೆಯಂತೆ ನಡೆದರೆ, ಲಾಭದ ಗರಿಷ್ಠೀಕರಣದ ವರ್ತನೆಯು ಅವರಿಗೆ ತಾವು ವ್ಯಯಿಸಿದ ಸೀಮಾಂತ ವೆಚ್ಚಕ್ಕಿಂತ (marginal cost)ಹೆಚ್ಚಿನ ಬೆಲೆ ತರುತ್ತದೆ ಮತ್ತು ಇದು ಪರಿಪೂರ್ಣ ಸ್ಪರ್ಧೆಯ ಸನ್ನಿವೇಶದಲ್ಲಿ ದೊರಕುವ ಲಾಭಕ್ಕಿಂತ ಹೆಚ್ಚಾಗಿರುತ್ತದೆ. ಆದರೆ ಬರ್ಟ್ರಾಂಡ್ ಅವರು ಈ ವಾದಕ್ಕೆ ಆಕ್ಷೇಪಣೆಯನ್ನು ಎತ್ತುತ್ತಾರೆ. ಅವರು ಹೇಳುತ್ತಾರೆ: ಒಂದು ವೇಳೆ ಖರೀದಿದಾರರು ಆಗಲೇ ನಿಗದಿತ ಬೆಲೆಗಳಲ್ಲಿ ತಾವು ಖರೀದಿಸಲು ಬಯಸುವ ಪ್ರಮಾಣವನ್ನು ನಿರ್ಧರಿಸುತ್ತಿದ್ದ ವೇಳೆಯಲ್ಲಿ, ಉದ್ಯಮ ಸಂಸ್ಥೆಗಳು ತಾವು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾದ ಸರಕಿನ ಪ್ರಮಾಣವನ್ನು ನಿರ್ಧರಿಸುವ ಬದಲು, ಬೆಲೆಯನ್ನು ನಿರ್ಧರಿಸುತ್ತಿದ್ದರೆ, ಫಲಿತಾಂಶವು ತುಂಬಾ ಭಿನ್ನವಾಗಿರುತ್ತದೆ: ಮಾರುಕಟ್ಟೆಯಲ್ಲಿ ಒಂದೇ ರೀತಿಯಾದ ಉತ್ಪನ್ನಗಳು ಲಭ್ಯ ಇದ್ದಾಗ, ಖರೀದಿದಾರರು ಅತಿ ಕಡಿಮೆ ಬೆಲೆಗೆ ಸರಕುಗಳನ್ನು ಪೂರೈಸುವ ಸಂಸ್ಥೆಯಿಂದ ಮಾತ್ರ ಖರೀದಿಸುತ್ತಾರೆ, ಮತ್ತು ಇದರಿಂದಾಗಿ ಇತರ ಸಂಸ್ಥೆಯು ಅದರ ಬೆಲೆಯನ್ನು ಕಡಿಮೆ ಮಾಡಲೇಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಇದರ ಅಂತಿಮ ಫಲಿತಾಂಶವೆಂದರೆ, ಎಲ್ಲಾ ಉದ್ಯಮ ಸಂಸ್ಥೆಗಳು ತಮ್ಮ ಉತ್ಪಾದನೆಯ ಸೀಮಾಂತ ವೆಚ್ಚಕ್ಕೆ ಸಮನಾಗುವಂತೆ ತಮ್ಮ ಸರಕುಗಳ ಬೆಲೆಯನ್ನು ಇಳಿಸಬೇಕಾಗುತ್ತದೆ. ಇದು ಪರಿಪೂರ್ಣ ಸ್ಪರ್ಧೆಯಲ್ಲಿ ನಮಗೆ

ಕಂಡುಬರುವ ಫಲಿತಾಂಶ. ಈ ಸಂದರ್ಭದಲ್ಲಿ ಸಂಸ್ಥೆಗಳು ಯಾವುದೇ ಲಾಭವನ್ನು (ಹೂಡಿಕೆ ಮಾಡಿದ ಬಂಡವಾಳದ ಮೇಲೆ ಬರಬೇಕಾದ ಸಾಮಾನ್ಯ ಆದಾಯದ ದರಕ್ಕಿಂತ ಹೆಚ್ಚಿಗೆ) ಮಾಡುವುದಿಲ್ಲ. ಈ ಉದ್ಯಮ ಸಂಸ್ಥೆಗಳಿಗೆ ಮಾರುಕಟ್ಟೆಯ ಮೇಲೆ ಇರುವ ಪ್ರಾಬಲ್ಯವನ್ನು ಪರಿಗಣಿಸಿದರೆ, ಇದು ಸ್ವಲ್ಪಮಟ್ಟಿಗೆ ವಿಪರ್ಯಾಸ ಎಂದೆನ್ನಿಸುತ್ತದೆ. ಉದ್ಯಮ ಸಂಸ್ಥೆಗಳು ಸೀಮಾಂತ ಆದಾಯ ಮತ್ತು ಸೀಮಾಂತ ವೆಚ್ಚ ಸರಿದೂಗಿಸುವಂತೆ ಮಾರುಕಟ್ಟೆಯಲ್ಲಿ ಸರಕುಗಳ ಬೆಲೆ ನಿಗದಿ ಮಾಡಿ, ಮಾರುಕಟ್ಟೆಯನ್ನು ತಮ್ಮೊಳಗೆ ಹಂಚಿಕೊಂಡು, ಒಳಸಂಚು ಮತ್ತು ತಂತ್ರಗಾರಿಕೆಯಿಂದ ಏಕಸ್ವಾಮ್ಯಗಳಂತೆ ವರ್ತಿಸಬಹುದು (ಹೀಗೆ ವರ್ತಿಸಲು ಅವರಿಗೆ ಸಾಕಷ್ಟು ಬಲವಾದ ಪ್ರೋತ್ಸಾಹಕಗಳು ಕೂಡ ಇವೆ).

ಮಾರುಕಟ್ಟೆ ಸ್ವರೂಪ ಮತ್ತು ಸಮತೋಲನಕ್ಕೆ ಸಂಬಂಧಿಸಿದಂತೆ 1934ರಲ್ಲಿ ಪ್ರಕಟವಾದ ತಮ್ಮ ಕೃತಿ ಮಾರ್ಕ್‌ತ್ ಫಾರ್ಮ್ ಉನ್ತ್ ಗ್ಲೈಕ್ವಿಸ್ತ್ (Marktform und Gleichgewicht (Market Structure and equilibrium)ನಲ್ಲಿ ಜರ್ಮನ್ ಅರ್ಥಶಾಸ್ತ್ರಜ್ಞರಾದ ಹೆನ್ರಿಕ್ ವಾನ್ ಸ್ಟಾಕೆಲ್ಬರ್ಗ್ (1905-1946), ಎರಡು ದ್ವಿಜನಸ್ವಾಮ್ಯಗಳನ್ನು ಅಸಮ ಸೂತ್ರದ (asymmetric)ದ ನೆಲೆಯಲ್ಲಿ ವಿಶ್ಲೇಷಿಸಿದರು: ಒಬ್ಬರು 'ಮುಂದಾಳು'ವಾಗಿದ್ದರೆ, ಇನ್ನೊಬ್ಬರು 'ಹಿಂದಾಳು.' (ಹಿಂದಾಳು ಮುಂದಾಳುವಿನ ಒಂದು ನಿರ್ದಿಷ್ಟ ಪೂರೈಕೆಯನ್ನು ಬಳಸಿ ತನ್ನ ಲಾಭವನ್ನು ಗರಿಷ್ಠಗೊಳಿಸುತ್ತಾನೆ. (ಇದಕ್ಕೆ ಬದಲಿಯಾಗಿ ಮುಂದಾಳು, ಹಿಂದಾಳುವಿನೊಂದಿಗೆ ಪೂರೈಕೆಗೆ ಸಂಬಂಧಿಸಿದಂತೆ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ತನ್ನ ಲಾಭವನ್ನು ಹೆಚ್ಚಿಸಿಕೊಳ್ಳುತ್ತಾನೆ.) ಮುಂದಾಳುವಿನ ಉತ್ಪಾದನೆ ಮತ್ತು ಮಾರಾಟ ಮತ್ತು ಅದರಿಂದ ಬರುವ ಲಾಭವು, ಸಮತೋಲಿತ ನೆಲೆಯಲ್ಲಿ, ಪ್ರತಿಸ್ಪರ್ಧಿಗಳಿಗಿಂತ ಹೆಚ್ಚಾಗಿರುತ್ತದೆ. ಒಂದು ವೇಳೆ ಎರಡೂ ಉದ್ಯಮ ಸಂಸ್ಥೆಗಳು ನಾಯಕತ್ವದ ಪಾತ್ರಕ್ಕೆ ಪೈಪೋಟಿ ನಡೆಸಿದರೆ, ಅಲ್ಲಿ ಸಮತೋಲನ ಕಳೆದುಹೋಗುತ್ತದೆ (ಬದಲಿಗೆ ಅಲ್ಲಿ ಎರಡೂ ಉದ್ದಿಮೆಗಳ ನಡುವೆ ಕಾನೂನು ಮತ್ತು ಕಾನೂನುಬಾಹಿರ ವಿಧಾನಗಳೆರಡೂ ಸೇರಿಕೊಂಡ, ಒಂದು ವಿನಾಶಕಾರಿ ಪೈಪೋಟಿ  ಉದ್ಭವಿಸುವ ಅಪಾಯವಿದೆ. ಸ್ಟಾಕೆಲ್ಬರ್ಗ್ ಇದು ಅತ್ಯಂತ ಸಂಭವನೀಯ ಸನ್ನಿವೇಶ ಎಂದು ಪರಿಗಣಿಸಿ, ಸಮತೋಲನ ಸಿದ್ಧಾಂತ (equilibrium theory) ಅಪ್ರಯೋಜಕ, ಎಂಬ ನಿರ್ಧಾರಕ್ಕೆ ಬಂದರು.ಅಲ್ಪಸಂಖ್ಯಾಸ್ವಾಮ್ಯಕರಣ(oligopolization)ದ ದೃಷ್ಟಿಯಿಂದ ನೋಡುತ್ತಾ, ಅವರು ಮಾರುಕಟ್ಟೆ ಆಧಾರಿತ ಆರ್ಥಿಕ ವ್ಯವಸ್ಥೆಗೆ ಸುಗಮವಾಗಿ ಕಾರ್ಯನಿರ್ವಹಿಸುವ ಮತ್ತು ಸಂಪನ್ಮೂಲಗಳನ್ನು ಅವುಗಳ ಸಾಮರ್ಥ್ಯದ ಗರಿಷ್ಟ ಮಟ್ಟಕ್ಕೆ ಉಪಯೋಗಿಸಲು ಸಾಧ್ಯವೇ ಎಂಬ ಬಗ್ಗೆ ಸಂಶಯ ವ್ಯಕ್ತಪಡಿಸಿದರು (ಇದೇ ಕಾರಣಕ್ಕಾಗಿ ಅವರು ಕೆಲಕಾಲ ಸರಕಾರ -ನಿಯಂತ್ರಿತ ಕೈಗಾರಿಕಾ ಸಂಘಗಳು ಮತ್ತು ಆರ್ಥಿಕ ಚಟುವಟಿಕೆಗಳ ಮೇಲೆ

ಗಮನಾರ್ಹ ನಿಯಂತ್ರಣ ಹೊಂದಿರುವ ನಿಗಮಿತ ರಾಜ್ಯ (corporatist state)ದ ಪ್ರತಿಪಾದಕರಾಗಿದ್ದ ನಾಜೀಗಳ ಕಡೆಗೆ ವಾಲಿದರು).

## ಮತ್ತಷ್ಟು ಬೆಳವಣಿಗೆಗಳು

ಅಪರಿಪೂರ್ಣ ಮತ್ತು ಏಕಸ್ವಾಮ್ಯ ಪೈಪೋಟಿಯ ಕುರಿತಾಗಿ ಆರಂಭಿಕವಾಗಿ ನಡೆದ ಈ ಅಧ್ಯಯನಗಳ ನಂತರ, ಮಾರುಕಟ್ಟೆಯ ವಿವಿಧ ಸ್ವರೂಪಗಳ ಕುರಿತು ಸಮೃದ್ಧವಾದ ಸಾಹಿತ್ಯ ರಚನೆಯಾಗಿದೆ ಮತ್ತು ಇದು 'ಔದ್ಯೋಗಿಕ ಅರ್ಥಶಾಸ್ತ್ರ'(industrial economics ) ಅಥವಾ ' ಔದ್ಯೋಗಿಕ  ಸಂಘಟನೆ'(industrial organization)" ಎಂದು ಕರೆಯಲ್ಪಡುವ ಅರ್ಥಶಾಸ್ತ್ರದ ಹೊಸ ಕ್ಷೇತ್ರದ ಬೆಳವಣಿಗೆಗೆ ಕಾರಣವಾಗಿದೆ. ಉದ್ಯಮದ ಸಿದ್ಧಾಂತ, ಉದ್ಯಮದ ಗಡಿಗಳು ಮತ್ತು ಮಾರುಕಟ್ಟೆಯೊಂದಿಗಿನ ಅದರ ಸಂಬಂಧದ ಅನ್ವೇಷಣೆ ಔದ್ಯೋಗಿಕ  ಅರ್ಥಶಾಸ್ತ್ರದ ಅವಿಭಾಜ್ಯ ಅಂಗವಾಗಿದೆ. (ಇಲ್ಲಿ ನಿರ್ದಿಷ್ಟವಾಗಿ ಕೇಳಲಾಗುವ ಪ್ರಶ್ನೆಗಳೆಂದರೆ: ಮಾರುಕಟ್ಟೆಯಲ್ಲಿನ ಎಲ್ಲಾ ಕಾರ್ಯಭಾರಿಗಳು ಔಪಚಾರಿಕ ನೆಲೆಯಲ್ಲಿ ಸಮಾನರಾಗಿದ್ದರೆ, ಉದ್ಯಮಗಳು (ಅಂದರೆ, ಸದಸ್ಯರ ನಡುವೆ ಶ್ರೇಣಿ ವ್ಯವಸ್ಥೆಯಿಂದ ನಿರೂಪಿಸಲ್ಪಟ್ಟ ಮಾರುಕಟ್ಟೆಯೇತರ ಸಂಸ್ಥೆಗಳು) ಇರುವುದು ಏಕೆ? ಎಲ್ಲಾ ಆರ್ಥಿಕ ವಹಿವಾಟುಗಳನ್ನು ಮಾರುಕಟ್ಟೆಗಳ ಮೂಲಕ ಏಕೆ ನೇರವಾಗಿ ನಿರ್ವಹಿಸಲಾಗುವುದಿಲ್ಲ? 1937ರಲ್ಲಿ ಪ್ರಕಟವಾದ,ದಿ ನೇಚರ್ ಆಫ್ ದಿ ಫರ್ಮ್  (The Nature of the Firm) ಎಂಬ  ಕೃತಿಯಲ್ಲಿ  ರೊನಾಲ್ಡ್ ಕೋಸ್ (1910-2013), 'ವ್ಯವಹಾರದ ವೆಚ್ಚಗಳು, ಅಂದರೆ ವ್ಯಾವಹಾರಿಕ ಚೌಕಾಶಿಗೆ ತಗಲುವ ವೆಚ್ಚಗಳು, ಜಾರಿಗೊಳಿಸಬಹುದಾದ ಒಪ್ಪಂದಗಳನ್ನು ಬರೆಯಲು ತಗಲುವ ವೆಚ್ಚಗಳು ಇತ್ಯಾದಿ ವೆಚ್ಚಗಳನ್ನು ಸರಿತೂಗಿಸಲು, ಕಡಿಮೆಗೊಳಿಸಲು ಉದ್ಯಮ ಸಂಸ್ಥೆಗಳು ಸಹಾಯಕವಾಗುವುದರಿಂದ ಅವು ಅಸ್ತಿತ್ವದಲ್ಲಿವೆ,' ಎಂದು ವಾದಿಸುತ್ತಾರೆ. 'ಆರ್ಥಿಕ ಚಟುವಟಿಕೆಗಳನ್ನು ಕಾಡುವ ಅನಿಶ್ಚಿತತೆಯ ಕಾರಣದಿಂದಾಗಿ, ಕಾರ್ಮಿಕ ಒಪ್ಪಂದಗಳು ವಿಶೇಷವಾಗಿ ಅಪೂರ್ಣವಾಗಿ ಉಳಿಯುತ್ತವೆ,' ಎಂಬ ಅಂಶದ ಕಡೆಗೆ ಕೂಡ ಅವರು ಗಮನ ಸೆಳೆಯುತ್ತಾರೆ. ಕಾರ್ಮಿಕ ಒಪ್ಪಂದದಲ್ಲಿ ನಿರ್ದಿಷ್ಟವಾಗಿ ದಾಖಲಿಸದೆ ಇದ್ದ ಕಾರ್ಯಾಂಶವಾಗಿದ್ದರೂ ಕೂಡ, ಹಿರಿಯ ಅಧಿಕಾರಿ ತನ್ನ ಕೆಳಗಿನವರು ಒಂದು ಮಿತಿಯ ಒಳಗೆ ತಾನು ಹೆಚ್ಚುವರಿಯಾಗಿ ಹೇಳಿದ ಆದೇಶಗಳನ್ನು ಪಾಲಿಸಬೇಕೆಂದು ನಿರೀಕ್ಷಿಸಬಹುದು.

ಕೋಸ್ ಅವರ ನವಅಭಿಜಾತ  ಪ್ರತಿಪಾದನೆ ಪ್ರಶ್ನಾತೀತವಾಗಿ ಉಳಿಯಲಿಲ್ಲ. ದೊಡ್ಡ ಮಟ್ಟದಲ್ಲಿ ನಿರ್ವಹಣೆ ಮತ್ತು ವರ್ತನೆಗೆ ಸಂಬಂಧಿಸಿದ ಸಾಹಿತ್ಯವು ವಿಕಸನಗೊಂಡಿತು. ಅದರಲ್ಲಿ ಕೆಲವು

ಹರ್ಬರ್ಟ್ ಸೈಮನ್ ಅವರು ಮಾಡಿದ 'ಸಂಕೀರ್ಣ ಮತ್ತು ಅನಿಶ್ಚಿತ ಸಂದರ್ಭಗಳಲ್ಲಿ ಕಾರ್ಯಭಾರಿಗಳಿಗೆ ಕೇವಲ ಸೀಮಿತ ಆಯ್ಕೆ (corporatist state (bounded rationality) ಮಾತ್ರ ಬಳಸಲು ಸಾಧ್ಯವಾಗುತ್ತದೆ,' ಎಂಬ ಅವಲೋಕನದಿಂದ ಪಡೆದುಕೊಂಡದ್ದಾಗಿದೆ: ಉತ್ತಮಗೊಳಿಸುವ ಬದಲು ಅವರು "ತೃಪ್ತಿಕರ"ವಾಗಿಸುತ್ತಿದ್ದಾರೆ, ಅಂದರೆ, ಅವರು ತಾವು ಸಾಧಿಸಬಹುದಾದ ಮಟ್ಟದ ಗುರಿಗಳನ್ನಷ್ಟೆ ಇಟ್ಟುಕೊಂಡು ಅವುಗಳನ್ನು ಸಾಧಿಸಿದಾಗ ತೃಪ್ತಿಪಡುತ್ತಾರೆ. ಈ ವಿಚಾರಧಾರೆಗೆ ಬಂದ ಹಲವಾರು ಪ್ರತಿಕ್ರಿಯೆಗಳಲ್ಲಿ, ಉದ್ಯಮ ಎನ್ನುವುದು ಒಂದು ಏಕಶಿಲಾ ಅಸ್ತಿತ್ವ ಎಂಬ ಕಲ್ಪನೆಯನ್ನು ನಿರಾಕರಿಸಲಾಗಿದೆ. ಪ್ರಮುಖರು ಮತ್ತು ಕಾರ್ಯಭಾರಿ (principal-agent) ಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತಾದ ಸಾಹಿತ್ಯದಲ್ಲಿ, ನಿರ್ವಾಹಕರು(ಕಾರ್ಯಭಾರಿಗಳು) ಸಾಮಾನ್ಯವಾಗಿ ತಮ್ಮ ಪ್ರಮುಖ (ಷೇರುದಾರರು)ರಿಗೆ ತೊಂದರೆಯಾದರೂ ಪರವಾಗಿಲ್ಲ, ಆದರೆ ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬಿಟ್ಟುಕೊಡುವುದಿಲ್ಲ ಮತ್ತು ಅವರು ಅದನ್ನು ಒಂದು ಹಂತದವರೆಗೆ ಯಶಸ್ವಿಯಾಗಿ ಮಾಡಲು ಶಕ್ತರಾಗುತ್ತಾರೆ ಕೂಡ. ಏಕೆಂದರೆ ಪ್ರಮುಖರಿಗೆ ನೇರವಾಗಿ ಕಾರ್ಯಭಾರಿಗಳ ಮೇಲ್ವಿಚಾರಣೆ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ಮಾಡಬೇಕೆಂದರೂ ಕೂಡ ಅದಕ್ಕೆ ಹೆಚ್ಚಿನ ವೆಚ್ಚ ತಗಲುತ್ತದೆ.

ಅಮೆರಿಕನ್ ಗಣಿತಜ್ಞ ಜಾನ್ ಫೋರ್ಬ್ಸ್ ನ್ಯಾಶ್ (1928-2015), ಹಲವಾರು ಕಾರ್ಯಭಾರಿಗಳು ಅಥವಾ ಉದ್ಯಮಗಳ ಕಾರ್ಯತಂತ್ರದ ಪರಸ್ಪರ ಕ್ರಿಯೆಯನ್ನು ಅರಿತುಕೊಳ್ಳಲು ಅಸಹಕಾರ ಕ್ರೀಡಾ ಸಿದ್ಧಾಂತ(noncooperative game theory) ವನ್ನು ಅಭಿವೃದ್ಧಿಪಡಿಸಿದರು. 'ನ್ಯಾಶ್ ಸಮತೋಲನ' (Nash equilibrium) ಎಂಬುದು ಅಸಹಕಾರ ಕ್ರೀಡೆ ಒದಗಿಸುವ ಒಂದು ಪರಿಹಾರವಾಗಿದ್ದು, ಇಲ್ಲಿ ಪ್ರತಿಯೊಬ್ಬ ಕಾರ್ಯಭಾರಿಗೂ ಇತರ ಎಲ್ಲಾ ಕಾರ್ಯಭಾರಿಗಳ ಸಮತೋಲನ ತಂತ್ರಗಳು  ತಿಳಿದಿರಬೇಕಾಗುತ್ತದೆ ಮತ್ತು ತನ್ನ ಸ್ವಂತ ತಂತ್ರಗಳನ್ನು ಬದಲಾಯಿಸುವ ಮೂಲಕ ತನ್ನ  ಪರಿಸ್ಥಿತಿಯನ್ನು ಸುಧಾರಿಸಲು ಅವನಿಗೆ ಅವಕಾಶ ಇರುವುದಿಲ್ಲ. (ಕೇವಲ ಒಬ್ಬ ಕಾರ್ಯಭಾರಿಯನ್ನು ಪ್ರತ್ಯೇಕವಾಗಿ ನೋಡುವ ಮೂಲಕ ಆಟದ ಫಲಿತಾಂಶವನ್ನು ಊಹಿಸಲಾಗುವುದಿಲ್ಲ, ಏಕೆಂದರೆ ಅವನು ತನ್ನ ನಿರ್ಧಾರಗಳನ್ನು ಇತರರು ಮಾಡಿದ ನಿರ್ಧಾರಗಳ ಆಧಾರದ ಮೇಲೆ ಮಾಡಿರುವ ಸಾಧ್ಯತೆ ಇರುತ್ತದೆ. ಅಸಹಕಾರ  ಕ್ರೀಡಾ ಸಿದ್ಧಾಂತ ಮತ್ತು ನ್ಯಾಶ್ ಸಮತೋಲನದ ಪರಿಕಲ್ಪನೆಯನ್ನು ಬಹುಜನಸ್ವಾಮ್ಯದ ಸಂದರ್ಭದಲ್ಲಿ ಹುಟ್ಟಿಕೊಳ್ಳುವ ಪೈಪೋಟಿ, ಶಸ್ತ್ರಾಸ್ತ್ರ ಪೈಪೋಟಿ ಮತ್ತು ಯುದ್ಧದಂತಹ, ಹಿತಾಸಕ್ತಿಗಳ ಸಂಘರ್ಷ ಇರುವಂತಹ ವ್ಯಾಪಕ ಶ್ರೇಣಿಯ ಸನ್ನಿವೇಶಗಳಿಗೆ ಅನ್ವಯಿಸಲಾಗಿದೆ (ಅಧ್ಯಾಯ 12 ಸಹ ನೋಡಿ).

ಔದ್ಯಮಿಕ ಸಂಘಟನೆಯ ಸೈದ್ಧಾಂತಿಕ ಭಾಗದ ಜೊತೆಗೆ, ಉದ್ಯಮ ಸಂಸ್ಥೆಗಳು ಮತ್ತು ಕೈಗಾರಿಕೆಗಳ ನಿಜವಾದ ಸಂಘಟನೆ ಮತ್ತು ಕಾಲಾನಂತರದಲ್ಲಿ ಅವುಗಳ ಅಭಿವೃದ್ಧಿಯನ್ನು ಅರ್ಥಮಾಡಿಕೊಳ್ಳುವ ಅನ್ವಯಿಕ ಮತ್ತು ವಿವರಣಾತ್ಮಕ ಭಾಗ ಒಂದಿದೆ. ಉದಾಹರಣೆಗೆ, ಜೋ ಬೈನ್ (1912-1991) ಅವರ ಇಂಡಸ್ಟ್ರಿಯಲ್ ಆರ್ಗನೈಸೇಷನ್: ಎ ಟ್ರೈಟೀಸ್)(Industrial Organization: A Treatise (1959), ಆಲ್ಫ್ರೆಡ್ ಶ್ಯಾಂಡ್ಲರ್ಸ್ (1918-2007) ಅವರ ದಿ ಮ್ಯಾನೇಜರಲ್ (The Managerial Revolution in American Business (1962) , ಮತ್ತು ಫ್ರೆಡೆರಿಕ್ ಶೆರರ್  (1932- ) ಅವರ ಇಂಡಸ್ಟ್ರಿಯಲ್ ಮಾರ್ಕೆಟ್ ಸ್ಟ್ರಚರ್ ಅಂಡ್ ಎಕಾನಾಮಿಕ್ ಪರ್ಫಾರ್ಮೆನ್ಸ್ Industrial Market Structure and Economic Performance (1970) ನೋಡಿ. ಆಯಾ ಸಾಹಿತ್ಯದಲ್ಲಿನ ಪ್ರಮುಖ ವಿಷಯಗಳೆಂದರೆ, ಸಾಮೂಹಿಕ ಉತ್ಪಾದನೆಯ ಲಾಭಗಳು ಮತ್ತು ಹೆಚ್ಚು ಸಾಮಾನ್ಯವಾಗಿ, ಪ್ರಮಾಣಾಧಾರಿತ ಮತ್ತು ವ್ಯಾಪ್ತಿಯಾಧಾರಿತ ಮಿತವ್ಯಯ (economies of scale and scope). ಪ್ರಮಾಣಕ್ಕೆ ಸಂಬಂಧಿಸಿದಂತೆ, ಉದ್ಯಮ ಸಂಸ್ಥೆಯ ದಕ್ಷತೆಯು ಅದು ಉತ್ಪಾದಿಸುವ ಉತ್ಪನ್ನದ ಪ್ರಮಾಣದೊಂದಿಗೆ ಹೆಚ್ಚಾಗುತ್ತದೆ (ಅದು ಸಂಸ್ಥೆಯ ಆಂತರಿಕ ಆದಾಯವನ್ನು ಹೆಚ್ಚಿಸುವುದರಿಂದ), ವ್ಯಾಪ್ತಿಗೆ ಸಂಬಂಧಿಸಿದಂತೆ, ಅದು ಉತ್ಪಾದಿಸುವ ಉತ್ಪನ್ನಗಳ ವೈವಿಧ್ಯತೆಯೊಂದಿಗೆ ಹೆಚ್ಚಾಗುತ್ತದೆ (ಇದಕ್ಕೆ ಕಾರಣ, ಉತ್ಪಾದನಾಂಗ/ಒಳಹರಿವಿನ ಅವಿಭಾಜ್ಯತೆ, ಕಲಿಕೆಯ ಪ್ರಕ್ರಿಯೆಗಳು ಮತ್ತು ಹಕ್ಕುಸ್ವಾಮ್ಯವುಳ್ಳ ಮತ್ತು ಬೇರೆಯವರೊಂದಿಗೆ ಹಂಚಿಕೊಳ್ಳದೆ ಇರುವ ಅನುಕ್ತ ಜ್ಞಾನದ ಪುನರ್ ಅನ್ವಯ). ಆದ್ದರಿಂದ ಉತ್ಪನ್ನದ ವೈವಿಧ್ಯೀಕರಣವು ಉದ್ಯಮ ಸಂಸ್ಥೆಯ ಕಾರ್ಯಕ್ಷಮತೆಯನ್ನು ಉತ್ತಮಗೊಳಿಸಬಹುದು.

ಕೊನೆಯದಾಗಿ ಹೇಳುವುದಾದರೆ,  ಔದ್ಯೋಗಿಕ ಅರ್ಥಶಾಸ್ತ್ರವು ಆರ್ಥಿಕ ನಿಯಂತ್ರಣ, ನ್ಯಾಸ ವಿರೋಧಿ ಕಾನೂನು(antitrust law), ಸ್ವಾಮ್ಯ ಸನ್ನದು ಕಾನೂನು (patent law) ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ (R&D) ಸೇರಿದಂತೆ ಔದ್ಯೋಗಿಕ/ಕೈಗಾರಿಕಾ ನೀತಿಯ ಎಲ್ಲಾ ಆಯಾಮಗಳನ್ನು ಅನ್ವೇಷಿಸುತ್ತದೆ.